ಅ) ಸದರಿ ಯೋಜನೆಯಲ್ಲಿ ಸೂಳ್ಯ ತಾಲ್ಲೂಕಿಗೆ ವಿದ್ಯುದ್ದೀಕರಣಗೊಳಿಸಲು ತಗಲುವ ವೆಚ್ಚ ಸುಮಾರು ರೂ. 496.23 ಲಕ್ಷ.

ಇ) ಈ ಕಾಮಗಾರಿಯನ್ನು ಡಿಸೆಂಬರ್ 2002 ರಲ್ಲಿ ಪೂರ್ತಿಗೊಳಿಸಬೇಕಾಗಿತ್ತು. ಪೂರ್ತಿಗೊಲಿಸಲು ನಿಗದಿ ಪಡಿಸಿದ ಅವಧಿ 8 ತಿಂಗಳು (ಜುಲೈ 2002 ಮಾರ್ಚ್ 2003).

ಬೆಂಗಳೂರಿನಲ್ಲಿ ಕೇಂದ್ರೀಯ ವಿಸ್ತರಣ ವಿಭಾಗದಿಂದ ಬಸ್ಸುಗಳ ಸಂಚಾರ

2019 (2585) - ಶ್ರೀ ಅಂಗಾರ ಎಸ್. (ಸುಳ್ಯ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಲೂರಿನ ಯಾವ ಯಾವ ಕೇಂದ್ರಿಯ ವಿಸತ್ರಣ ವಿಭಾಗದಿಂದ ಬಸ್ಸುಗಳ ಸಂಚಾರವನ್ನು ಪ್ರಾರಂಬಿಸಿದೆ; (ಎಂದಿನಿಂದ ಯಾವ ಯಾವ ಸ್ಥಳಗಳಿಗೆ ಇತ್ಯಾದಿ ವಿವರ ನೀಡುವುದು)

ಆ) ಯಲಹಂಕ ಉಪನಗರದಿಂದ ಅಂತಹ ಬಸ್ ಸೇವೆ ಇಲ್ಲದಿರುವುದು ನಿಜವೆ;

ಇ) ಹಾಗಿದ್ದಲ್ಲಿ, ಕರ್ನಾಟಕದ ನಾಲ್ಕು ವಿಭಾಗಗಳಿಗೆ ಇಂತಹ ಬಸ್ ಸಂಚಾರವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೆ;

ಈ) ಉಪನಗರದಿಂದ ಧರ್ಮಸ್ಥಳ, ತಿರುಪತಿ, ಮಂತ್ರಾಲಯ ಹಾಗೂ ಮೈಸೂರಿಗೆ ಬಸ್ ಸಂಚಾರ ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದೇ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ ಮತಿಯಿಂದ ಬೆಂಗಳೂರು ನಗರದಲ್ಲಿ 13 ವಿಸ್ತರಣಾ ವಿಭಾಗಗಳಿಂದ 21 ದೂರ ಮಾರ್ಗ ವಾಹನಗಳನ್ನು ಆಚರಣೆ ಮಾಡಲಾಗುತ್ತದೆ. ಇದರ ವಿವರಗಳನ್ನು ಅನುಬಂದ (ಅ) ರಲ್ಲಿ ಲಗತ್ತಿಸಿದೆ.

ಆ) ಹೌದು.

ಇ) ಇಲ್ಲ. ಸದರಿ ವಾಹನಗಳಲ್ಲಿ ನಿರೀಕ್ಷಿತ ಪ್ರಯಾಣಿಕರು ಸಿಗುವ ಸಂಭವವಿಲ್ಲ.

ಈ) ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ANNEXURE 'A'

LIST OF SERVICES OPERATED FROM EXTENSION AREAS OF BANGALORE CITY

Sl. No.	Destination	Type of	Pickup point	Via Places	Date of introduction
1.	Cannanore	S-DLx	Kalasipalyam	Corporation	Aug-2000
2.	Mantraya	Ultra Dlx	Jayanagar 4th Block	South End Circle, Chamarajpet	-do -
3.	Tirupathi	Ultra	-do-	-do-	- do-
4.	Hyderabad	Ultra	J.P. Nagar	Jayanagar JC Rd.	-do-

1	2	3	4	5	6
5.	Chonnai	Deluxe	-do-	-do-	-do-
6.	Sringeri	Ultra	Padmanabha nagar	Hanumantha nagar	-do-
7.	Chennai	Ultra	Hanumantha nagar	Chamarapet	-do-
8.	Hyderabad	Ultra	Kalasipalyam	Corporation	-do-
9.	Chennai	Deluxe	Koramangala	Dairy Circle, KH Road	-do-
10.	Mangalore	Deluxe	Koramangala	-do-	-do-
11	Balijakandriga	S. Deluxe	Katriguppe	Chamarajpet	-do-
12.	Pondicherry	S.Deluxe	Kalasipalyam	Corporation	-do-
13.	Kohapura	Ultra	Koramangala	Dairy Circle, KH Road	-do-
14.	Villupuram	Express	Kalasipalyam	Corporation	Dec. 2002
15.	Thiruvann amalai	Express	-do-	-do-	
16.	Mysore	Non Srop	Jayanagar 4th Block	Southend JC Road	Jan. 98
17.	Mangalore	Rajahamsa	JP Nagar	Jayanagar 4th block Chamarajpet	Sept. 2001
18.	Mangalore/ Suralkal	Deluxe	Indiranagar	-	Sept 2001
19.	Mangalore	Deluxe	Vijayanagar	-	-do-
20.	Coondapura	Rajahamsa	Southend Circle	Hanumanthna gar, Chamarajpet	June 2002
21.	Coondapur	P-5000	Chandra Layout	Vijayanagara	-do-

2002 - 2003ನೇ ಸಾಲಿನಲ್ಲಿ ಅಬಕಾರಿ ಹರಾಜಿನಿಂದ ಬರಬೇಕಾದ ಹಣ

2022 (2572) - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ರಾಜ್ಯದ ಬೊಕ್ಕಸಕ್ಕೆ ಅಬಕಾರಿ ಹರಾಜಿನಿಂದ ಬಂದಿರುವ ಹಣವೆಷ್ಟು; ಬಾಕಿ ಎಷ್ಟಿದೆ? ಬಾಕಿ ವಸೂಲು ಮಾಡಲು ಕೈಗೊಂಡಿರುವ ಕ್ರಮ ಏನು?

ಆ) ಇದೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಿಂದ ಸರ್ಕಾರದ ಬೊಕ್ಕಸಕ್ಕೆ ಬಂದಿರುವ ಹಣ ಎಷ್ಟು ಬಾಕಿ ಇದೆ? ಬಾಕಿ ವಸೂಲಾತಿ ಕೈಗೊಂಡಿರುವ ಕ್ರಮವೇನು?